**MUNISH MOUDGIL, I.A.S.,**
**Commissioner, Rural Development**
Rural Development and
Panchayath Raj Department
Government of Karnataka

Phone : 080-22372738/22032238
Tele fax : 080-22342163
Mobile : 9480866666
E-mail : nregs-ka@nic.in

Karnataka Government Secretariat-2
3rd Gate, 2nd Floor, Room No. 210
M.S. Building, Bangalore-560 001, Karnataka

ಅ.ಸ. ಪತ್ರ ಸಂಖ್ಯೆ: ಗ್ರಾಅಪ 439 ಉಖಾಯೋ 2015 ದಿನಾಂಕ: 26-09-2015

**2016-17ನೇ ಸಾಲಿಗೆ ಮಹಾತ್ಮ ಗಾಂಧಿ ನರೇಗಾದಡಿ ಕೂಲಿ ಆಯವ್ಯಯ ಗ್ರಾಮ ಸಭಾ/ವಾರ್ಡ್ ಸಭಾ ಮೂಲಕ ತಯರಿಸುವ ಕುರಿತು.**

ಪ್ರಿಯಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರೇ,

2016-17ನೇ ಸಾಲಿಗೆ ಮಹಾತ್ಮ ಗಾಂಧಿ ನರೇಗಾದಡಿ ಕೂಲಿ ಆಯವ್ಯಯ ಗ್ರಾಮ ಸಭಾ/ವಾರ್ಡ್ ಸಭಾ ಮೂಲಕ ತಯಾರಿಸುವ ಕುರಿತಂತೆ ಶೀಘ್ರವಾಗಿ ಈ ಕೆಳಗಿನಂತೆ ಕ್ರಮವಹಿಸಲು ಕೋರಿದೆ;

1. ಆಕ್ಟೋಬರ್ 07, 2015ರಿಂದ ಚಾಲನೆಗೆ ಬರುವಂತೆ ವಾರ್ಡ್‌ಸಭಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಎಲ್ಲಾ ಗ್ರಾಮ ಪಂಚಾಯತಿಗಳಗಾಗಿ ತಯಾರಿಸುವುದು.

   ಆಯಾ ವಾರ್ಡಿನ ಗ್ರಾಮ ಪಂಚಾಯತಿಯ ಚುನಾಯಿತ ಸದಸ್ಯರು ಸದರಿ ವಾರ್ಡ್ ಸಭೆಯ ಅಧ್ಯಕ್ಷರಾಗಿರುತ್ತಾರೆ.

   ಅದ್ದರಿಂದ: ಒಂದು ಗ್ರಾಮ ಪಂಚಾಯತಿಯಲ್ಲಿ ವಾರ್ಡ್‌ಸಭೆಗಳ ಸಂಖ್ಯೆ = ಗ್ರಾಮ ಪಂಚಾಯತಿ ಸದಸ್ಯರ ಸಂಖ್ಯೆ.

2. (a) ತಾಲ್ಲೂಕು ಎಮ್‌ಐಎಸ್ ಸಂಯೋಜಕರು END2END ತಂತ್ರಾಂಶದಿಂದ ಪ್ರತಿಯೊಬ್ಬ ಗ್ರಾಮ ಪಂಚಾಯತಿ ಸದಸ್ಯರಿಗಾಗಿ 'ವಾರ್ಡ್‌ಸಭಾ' ಪುಸ್ತಕ ಮುದ್ರಿಸಿಕೊಳ್ಳತಕ್ಕದ್ದು.

   (b) ನಂತರ ಎಲ್ಲಾ ಸಂಬಂಧಿತ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ತಾಲ್ಲೂಕು ಮಟ್ಟದಲ್ಲಿ ಕರೆಸಿಕೊಂಡು, ಪ್ರತಿಯೊಬ್ಬ ಗ್ರಾಮ ಪಂಚಾಯತಿ ಸದಸ್ಯರ ಹೆಸರಿನಲ್ಲಿ ಹಸ್ತಾಂತರಿಸಿತಕ್ಕದ್ದು. ಸೆಪ್ಟೆಂಬರ್ 30, 2015ರಿಂದ ವಾರ್ಡ್‌ಸಭಾ ಪುಸ್ತಕಗಳನ್ನು ಮುದ್ರಿಸಿಕೊಳ್ಳತಕ್ಕದ್ದು.

   END2END ತಂತ್ರಾಂಶದ ಮೂಲಕ ಈ ವಾರ್ಡ್‌ಸಭಾ ಪುಸ್ತಕ ಮುದ್ರಣಕ್ಕೆ ಅವಕಾಶ ಕಲ್ಪಿಸಲಾಗುವುದು.

   ಪ್ರತಿಯೊಬ್ಬ ವಾರ್ಡ್‌ಸಭಾ ಗ್ರಾಮ ಪಂಚಾಯತಿ ಸದಸ್ಯನು ಇಂತಹ ಒಂದು ವಾರ್ಡ್‌ಸಭಾ ಪುಸ್ತಕ ಪಡೆದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

3. **ವಿಶೇಷ ಸೂಚನೆ:** END2END ತಂತ್ರಾಂಶದಿಂದ ಮುದ್ರಿತವಾಗುವ ಪ್ರತಿ ವಾರ್ಡ್‌ಸಭಾ ಪುಸ್ತಕ ಬಾರ್‌ಕೋಡ್ ಮತ್ತು ವಿಶಿಷ್ಟ ಅದ್ವಿತಿಯ ಸಂಕೇತ ಹೊಂದಿರುತ್ತದೆ. ಇದರಿಂದ ಪ್ರತಿ 'ವಾಡ್‌ಸಭಾ' ಪುಸ್ತಕಗಳನ್ನು ಗುರುತಿಸಬಹುದು (Tracked).
4. 30ನೇ ಸೆಪ್ಟೆಂಬರ್ 2015ರೊಳಗೆ ವಾರ್ಡ್‌ಸಭಾ ಪುಸ್ತಕಗಳನ್ನು ಮುದ್ರಿಸಿತಕ್ಕದ್ದು ಮತ್ತು 2ನೇ ಆಕ್ಟೋಬರ್ 2015ರಂದು ಪ್ರತಿ ಗ್ರಾಮ ಪಂಚಾಯತಿ ಹೆಸರಿನಲ್ಲಿ ನೀಡತಕ್ಕದ್ದು.
5. (a) 7ನೇ ಆಕ್ಟೋಬರ್ 2015ರಿಂದ ವಾರ್ಡ್‌ಸಭಾಗಳು ಪ್ರಾರಂಭವಾಗಿ 20ನೇ ಆಕ್ಟೋಬರ್ 2015ರೊಳಗೆ ಮುಗಿಯುವಂತೆ, ತಾವು ಅಗತ್ಯ ಸೂಚನೆಗಳನ್ನು ನೀಡತಕ್ಕದ್ದು.

   (b) ವಾರ್ಡ್‌ಸಭಾ ನಡೆಸಿ ಮಾಹಿತಿ ಭರ್ತಿ ಮಾಡಿದ ನಮೂನೆಗಳನ್ನು ಡಾಟಾ ಎಂಟ್ರಿ ಮಾಡಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಗೆ ಹಿಂದಿರುಗಿಸತಕ್ಕದ್ದು.